1	2	3	4
4) ಹಿರಿಯ ಪಶುವೈದ್ಯ ಪರೀಕ್ಷಕರು	09	09	-
5) ಪಶುವೈದ್ಯಕೀಯ ಸಹಾಯಕರು	10	07	03
6) 'ಡಿ' ಗ್ರೂಪ್	22	19	03
ಒಟ್ಟು	50	40	10

ಆ) ಎರಡು ಪ್ರಸ್ತಾವನೆಗಳಿವೆ. ಆದರೆ ಯಾವುದೇ ಹೊಸ ಸಂಸ್ಥೆಯನ್ನು ಮಂಜೂರು ಮಾಡಲು ಸರ್ಕಾರವು ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿರುವುದಿಲ್ಲ.

ರಾಜ್ಯದಲ್ಲಿ ಅಂತರ್ಜಲ ಮಟ್ಟದ ಸುಧಾರಣೆ

1334(1417) ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೊಟೆ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅಂತರ್ಜಲ ಮಟ್ಟದ ಸುಧಾರಣೆಯೂ ಸೇರಿದಂತೆ ಕುಡಿಯುವ ನೀರಿನ ಸಂರಕ್ಷಣೆಗೆ ಸರ್ಕಾರ ಯಾವ ಯೋಜನೆ ಹಮ್ಮಿಕ್ಕೊಂಡಿದೆ?

ಆ) ಯೋಜನೆಯ ಅವಧಿ ಎಷ್ಟು; ಎಷ್ಟು ಹಣ ಖರ್ಚು ಮಾಡಲಾಗುವುದು?

ಇ) ಈ ನಿಟ್ಟಿನಲ್ಲಿ ಭೂವಿಜ್ಞಾನ ಇಲಾಖೆಯ ಮಾದರಿಗಳನ್ನು ನಿರ್ಮಿಸಲು ಕ್ರಮ ಕೈಗೊಂಡಿದೆಯೇ?

ಈ) ಈಗಾಗಲೇ ಈ ಯೋಜನೆಯಡಿ ಯಾವ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿದೆ?

ಉ) ಉಳಿದ ಪೊತ್ತವನ್ನು ಇತರ ಜಿಲ್ಲೆಗಳ ಎಷ್ಟು ಗ್ರಾಮಗಳಿಗೆ ಅನುಷ್ಠಾನಗೊಳಿಸಲಾಗುವುದು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ಅಂತರ್ಜಲ ಮಟ್ಟ ತೀವ್ರ ಕುಸಿತವಿರುವ ಪ್ರದೇಶಗಳಲ್ಲಿ ಆದ್ಯತೆಯ ಮೇರೆಗೆ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಿಸುವ ಸಲುವಾಗಿ'ಜಲಸಂಪನ್ಮೂಲ ಕ್ರೋಢೀಕರಣ ಯೋಜನೆ-(ಅಂತರ್ಜಲ ಭಾಗ)' (Water Resources Consolidation Project (Grondwater Component) ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಲಾಗಿದೆ.

ಆ) ಈ ಯೋಜನೆಯ ಅವಧಿ 5 ವರ್ಷಗಳಾಗಿದ್ದು ಯೋಜನೆಯ ಗಾತ್ರ ರೂ. 471.00 ಕೋಟಿಯ ವೆಚ್ಚದ್ದಾಗಿರುತ್ತದೆ.

ಇ) ಕೈಗೊಂಡಿದೆ.

ಈ) ಅಂತರ್ಜಲ ಇಳಿಮುಖವಾಗುತ್ತಿರುವ ಎಲ್ಲಾ ಜಿಲ್ಲೆಗಳಲ್ಲೂ ಈ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಉ) ಅಂತರ್ಜಲ ಇಳಿಮುಖವಾಗುತ್ತಿರುವ ಎಲ್ಲಾ ತಾಲ್ಲೂಕುಗಳಲ್ಲೂ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

ರಾಜ್ಯದ ಕೆ.ಹೆಚ್.ಡಿ.ಸಿ. ನೇಕಾರರಿಗೆ ನೇಯ್ಗೆ ಕೂಲಿ

1335(1641) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಕೆ.ಎಚ್.ಡಿ.ಸಿ. ಅಧೀನದಲ್ಲಿ ಕೆಲಸ ಮಾಡುತ್ತಿರುವ ಬಾಗಲಕೋಟೆ, ಬಿಜಾಪುರ ಜಿಲ್ಲೆಗಳ ಕೈಮಗ್ಗ ನೇಕಾರರು ಕಚ್ಚಾವಸ್ತು ಸಮರ್ಪಕವಾಗಿ ಹಾಗೂ ನಿರಂತರವಾಗಿ ದೊರೆಯದ ಕಾರಣಕ್ಕಾಗಿ ಹಾಗೂ ನೇಯ್ಗೆ ಕೂಲಿ ನಿಯಮಿತವಾಗಿ ದೊರೆಯದ ಕಾರಣಕ್ಕಾಗಿ ತೊಂದರೆ ಅನುಭವಿಸುತ್ತಿರುವ ವಿಷಯ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು. ವಿವರ ನೀಡುವುದು?

ಇ) ಕೆ.ಎಚ್.ಡಿ.ಸಿ. ಬಡ ನೇಕಾರರಿಗೆ ರಾಜ್ಯದಲ್ಲಿ ಮನೆ ಕಟ್ಟಿಸಿಕೊಡುವ ಯೋಜನೆ ಜಾರಿಯಲ್ಲಿದೆಯೇ?

ಈ) ಹಾಗಿದ್ದಲ್ಲಿ ರಾಜ್ಯದಲ್ಲಿ ಎಷ್ಟು ಮನೆ ಕಟ್ಟಿಸಿಕೊಡಲಾಗಿದೆ. ಜಿಲಾಲವಾರು ವಿವರ ನೀಡುವುದು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ತನ್ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ನೇಕಾರರುಗಳಿಗೆ ಸಮರ್ಪಕವಾಗಿ ಕಚ್ಚಾಮಾಲು ಒದಗಿಸುತ್ತಿದೆ. ಕಳೆದ 15 ದಿನಗಳಲ್ಲಿ ಮಿಲ್ಲುಗಳಿಂದ ನೂಲು ಸರಬರಾಜಾಗಲು ತೊಂದರೆ ಉಂಟಾಗಿದ್ದರಿಂದ ಕಚ್ಚಾಮಾಲು ಒದಗಿಸುವಲ್ಲಿ ಸ್ವಲ್ಪ ವಿಳಂಬ ಉಂಟಾಗಿ ಕೆಲವು ನೇಕಾರುಗಳಿಗೆ ತೊಂದರೆ ಉಂಟಾಗಿರುತ್ತದೆ.

ನೇಯ್ಗೆ ಮಜೂರಿಯನ್ನು ಸರಿಯಾಗಿ ನೇಕಾರರುಗಳಿಗೆ ಪಾವತಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ನೇಕಾರರಿಗೆ ಯಾವುದೇ ತೊಂದರೆ ಇರುವುದಿಲ್ಲ.

ಆ) ಸರ್ಕಾರವು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರ ಅನುಕೂಲಕ್ಕಾಗಿ ಈ ಕ್ರಮಗಳನ್ನು ಕೈಗೊಂಡಿರುತ್ತದೆ.

1. ನೇಕಾರರಿಗೆ ನಿರಂತರವಾಗಿ ಹಾಗೂ ಸಮರ್ಪಕವಾಗಿ ನೂಲು ಸರಬರಾಜು ಮಾಡುವ ದೃಷ್ಟಿಯಿಂದ ವಿದ್ಯಾ ವಿಕಾಸ ಯೋಜನೆ ಮತ್ತು ಅಗ್ಗ ದರದ ಸೀರೆ ಮತ್ತು ಪಂಚೆ ಯೋಜನೆ ಇವುಗಳನ್ನು ಮುಂದುವರಿಸಿಕೊಂಡು ಹೋಗುವುದು ಹಾಗೂ ಸರ್ಕಾರಿ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾ ಬಟ್ಟೆಗಳನ್ನು ನಿಗಮದಿಂದಲೇ ಖರೀದಿಸುವ ಬಗ್ಗೆ ಬೇಡಿಕೆಯನ್ನು ಪಡೆಯಲು ಕ್ರಮ ಕೈಗೊಂಡಿರುತ್ತದೆ.

2. ಬಟ್ಟೆಗಳ ಉತ್ಪಾದನೆಗೆ ನೇಕಾರರಿಗೆ ಅಗತ್ಯ ಪ್ರಮಾಣದ ನೂಲನ್ನು ಸಕಾಲದಲ್ಲಿ ಮಿಲ್ಲುಗಳಿಂದ ಖರೀದಿಸಲಾಗುತ್ತಿದೆ.

3. ಕೈಮಗ್ಗ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸಲು ಮಾರುಕಟ್ಟೆ ಪ್ರೋತ್ಸಾಹವನ್ನು ಒದಗಿಸಲಾಗುತ್ತಿದೆ.

4. ನೇಕಾರರನ್ನು ಇಲಾಖೆಯ ಕಲ್ಯಾಣ ಯೋಜನೆಗಳಡಿ ಅಳವಡಿಸಿಕೊಳ್ಳಲಾಗಿದೆ.

ಇ) ಹೌದು.

ಈ) ಒಟ್ಟು 3576 ಮನೆಗಳನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರುಗಳಿಗಾಗಿ ನಿರ್ಮಿಸಲಾಗಿರುತ್ತದೆ. ವಿವರ ಈ ರೀತಿಯಿರುತ್ತದೆ.

ಕ್ರ.ಸ.	ಜಿಲ್ಲೆ	ಮನೆಗಳ ಸಂಖ್ಯೆ
1	2	3
1.	ಬೆಂಗಳೂರು	107
2.	ಬಾಗಲಕೋಟೆ	1281
3.	ಬೀದರ್	224
4.	ಬಿಜಾಪುರ	24
5.	ಬೆಳಗಾವಿ	205
6.	ಚಿತ್ರದುರ್ಗ	86
7.	ಧಾರವಾಡ	100
8.	ಹಾವೇರಿ	310
9.	ಗದಗ್	422
10.	ಗುಲ್ಬರ್ಗ	447
11.	ಕೊಪ್ಪಳ	207
12.	ತುಮಕೂರು	137
13.	ಚಾಮರಾಜನಗರ	07
14.	ಕೋಲಾರ	06
15.	ಮಂಡ್ಯ	13
	ಒಟ್ಟು	3576

ಇವುಗಳಲ್ಲಿ 1942 ಮನೆಗಳನ್ನು ಡಚ್ ಸಹಯೋಗದೊಂದಿಗೆ ಹಾಗೂ ಉಳಿದ 1634 ಮನೆಗಳನ್ನು ಕೇಂದ್ರ ಪುರಸ್ಕೃತ ಯೋಜನೆಯಡಿ ನಿರ್ಮಿಸಲಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಕೈಗೊಂಡ ಯೋಜನೆಗಳು

1336(1747) ಶ್ರೀ ಪೂಜಾರ್ ಪಿ.ಹೆಚ್(ಬಾಗಲಕೊಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ನೇರಸಾಲ ನೆರವಿಗೆ ಹೈನುಗಾರಿಕೆ ಯೋಜನೆ ಅನುಷ್ಠಾನದಲ್ಲಿ ಜಿಲ್ಲಾವಾರು, ತಾಲ್ಲೂಕುವಾರು ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ತಾರತಮ್ಯ ನಿವಾರಿಸಲು ಇಲ್ಲಿಯವರೆಗೆ ಕಡಿಮೆ ಸೌಲಭ್ಯ ಪಡೆದ ಜಿಲ್ಲೆ-ತಾಲ್ಲೂಕುಗಳಿಗೆ ಒಟ್ಟಾರೆ ಅನುಪಾತಕ್ಕೆ ಸರಿ ಹೊಂದುವಂತೆ ನೆರವಿನ ಹೆಚ್ಚಿನ ಯೂನಿಟ್‌ಗಳನ್ನು ನೀಡಲಾಗುವುದೇ; ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮವೇನು?

ಇ) ಕಳೆದ 3 ವರ್ಷಗಳಲ್ಲಿ ಬಾಗಲಕೊಟೆ ಜಿಲ್ಲೆಯಲ್ಲಿ ಸಾಲ ಮಂಜೂರು ಮಾಡಿದ ಫಲಾನುಭವಿಗಳ ಸಂಖ್ಯೆ ಹೆಸರು ಮತ್ತು ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.